ಕರ್ನಾಟಕ ಸರ್ಕಾರ
(ಪಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4 |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸೆಷನ್ಸ್ ಕೇಸ್ ನಂಬರ್ : 214/2021**

**ಫ್ರಾಸಾ- 7 ಚಾಸಾ- 7**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಹರೀಶ |
| ತಂದೆಯ ಹೆಸರುಃ | : | ಲಕ್ಷ್ಮಯ್ಯ |
| ವಯಸ್ಸುಃ | : | 48 ವರ್ಷ |
| ಉದ್ಯೋಗಃ | : | ವ್ಯವಸಾಯ |
| ವಾಸ | : | ಜಿ ಮೈಲನಹಳ್ಳಿ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 06-05-2026:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ಈಗ ತೋರಿಸಿದ ನಿಪಿ-6 ರಿಂದ ನಿಪಿ-8ರಲ್ಲಿರುವ ರುಜುಗಳು ನನ್ನವೆ. ಸದರಿ ರುಜುಗಳನ್ನು ಠಾಣೆಯಲ್ಲಿ ಹಾಕಿರುತ್ತೇನೆ. ಏತಕ್ಕೆ ಸಹಿ ಹಾಕಿದ್ದೆಂದು ಗೊತ್ತಿಲ್ಲ. ಆ ಸಮಯದಲ್ಲಿ ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುವನ್ನು ವಶಪಡಿಸಿಕೊಂಡಿಲ್ಲ. ಸದರಿ ಸಹಿಗಳನ್ನು ನಿಪಿ-6(ಬಿ)ಯಿಂದ ನಿಪಿ-8(ಬಿ) ಎಂದು ಗುರುತಿಸಲಾಯಿತು. ಆರೋಪಿತರ ಪರಿಚಯವಿಲ್ಲ. ಪೊಲೀಸರು ಆರೋಪಿತರ ಹೇಳಿಕೆಯಂತೆ ಆತನ ಮನೆಗೆ ನನ್ನನ್ನು ಕರೆದುಕೊಂಡು ಹೋಗಿಲ್ಲ. ಅಲ್ಲಿ ಯಾವುದೇ ಆಭರಣವನ್ನು ನನ್ನ ಸಮಕ್ಷಮ ವಶಪಡಿಸಿಕೊಂಡಿಲ್ಲ. ನಿಪಿ-3 ರಲ್ಲಿ ಕಂಡುಬರುವ ಆಭರಣಗಳನ್ನು ನಾನು ಈ ಹಿಂದೆ ನೋಡಿಲ್ಲ. ನಿಪಿ-9ರಲ್ಲಿ ನಾನು ಇದ್ದೇನೆ. ಆರೋಪಿತರು ಇದ್ದಾರೆ. ಆರೋಪಿತರು ಚನ್ನಪಟ್ಟಣ 5ನೇ ಕ್ರಾಸ್ ನಲ್ಲಿರುವ ಮಂಜಪ್ಪ ಎನ್ನುವವರ ಮನೆಯಲ್ಲಿ ಯಾವುದೇ ಮಹಜರು ಮಾಡಿಲ್ಲ. ಹಾಗೆಯೇ ಗಾಡೇನಹಳ್ಳಿ ಕಡೆಗೆ ಹೋಗುವ ಟಾರುರಸ್ತೆಯಲ್ಲಿ ನನ್ನ ಸಮಕ್ಷಮ ಯಾವುದೇ ಪಂಚನಾಮೆ ನಡೆಸಿಲ್ಲ. ಆ ಮೂರೂ ಪಂಚನಾಮೆಯಲ್ಲಿ ಏನು ಬರೆದಿದೆ ಎನ್ನುವ ವಿಚಾರ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುವುದು ಕಂಡುಬರುತ್ತದೆ, ಆದ್ದರಿಂದ ಮಾನ್ಯ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ

ಪರಿಗಣಿಸಿ, ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ)

**ಪಾಟೀಸವಾಲುಃ ಸರ್ಕಾರದ ಪರ ಮಾನ್ಯ ಅಭಿಯೋಜಕರಿಂದಃ**

ದಿನಾಂಕ 7-1-2019ರಂದು ಪೊಲೀಸರು ನನ್ನನ್ನು ಹಾಸನದ ಗ್ರಾಮಾಂತರ ಪಿ ಎಸ್ ಗೆ ಕರೆಸಿದ್ದರು ಎಂದರೆ ಸರಿಯಲ್ಲ. ಠಾಣೆಗೆ ಹೋದಾಗ ಆರೋಪಿ ಕೂಡ ಇದ್ದರು ಎಂದರೆ ಸರಿಯಲ್ಲ. ಅಲ್ಲಿ ಆರೋಪಿಯು ತನ್ನ ಬಳಿ ಇದ್ದ ಒಂದು ಮೊಬೈಲ್ ಮತ್ತು ಒಂದು ಚಾಕುವನ್ನು ಹಾಜರುಪಡಿಸಿದರು, ಮತ್ತು ಠಾಣೆಯಲ್ಲಿ ಒಂದು ದ್ವಿಚಕ್ರ ವಾಹನ ಕೂಡ ಇತ್ತು ಅವೆಲ್ಲವನ್ನು ವಶಪಡಿಸಿಕೊಂಡು ಪೊಲೀಸರು ಠಾಣೆಯಲ್ಲಿ ನಿಪಿ-6ರಂತೆ ಮಾಡಿದ ಮಹಜರಿಗೆ ನಾನು ಸಹಿ ಹಾಕಿದ್ದು ಎಂದರೆ ಸರಿಯಲ್ಲ.

2.ಆ ನಂತರ ಆರೋಪಿಯು ನಮ್ಮನ್ನು ಮತ್ತು ಪೊಲೀಸರನ್ನು ಆತ ಬಾಡಿಗೆಗೆ ಇದ್ದ ಮಂಜಪ್ಪ ಎಂಬುವವರ ಮನೆಗೆ ಕರೆದುಕೊಂಡು ಹೋಗಿದ್ದ ಎಂದರೆ ಸರಿಯಲ್ಲ. ಅಲ್ಲಿ ಆತನು ಈ ಪ್ರಕರಣದಲ್ಲಿ ದೋಚಿಕೊಂಡಿದ್ದ ನಿಪಿ-3ರಲ್ಲಿ ಕಾಣಿಸಿದ ಚಿನ್ನದ ಸರಗಳನ್ನು ಹಾಜರುಪಡಿಸಿದ ಮೇರೆಗೆ ಪೊಲೀಸರು ವಶಪಡಿಸಿಕೊಂಡು ನಿಪಿ-7ರಂತೆ ಪಂಚನಾಮೆ ನಡೆಸಿದರು ಎಂದರೆ ಸರಿಯಲ್ಲ.

3.ಆ ನಂತರ ಆರೋಪಿಯು ನಮ್ಮನ್ನು ಮತ್ತು ಪೊಲೀಸರನ್ನು ಗಾಡೇನಹಳ್ಳಿ ಕಡೆಗೆ ಹೋಗುವ ಟಾರು ರಸ್ತೆಗೆ ಕರೆದುಕೊಂಡು ಹೋಗಿ ಅದೇ ಸ್ಥಳದಲ್ಲಿ ತಾನು ಚಿನ್ನದ ಸರವನ್ನು ದೋಚಿದ್ದು ಎಂದು ತೋರಿಸಿದ ಮೇರೆಗೆ ಪೊಲೀಸರು ನಿಪಿ-8ರಂತೆ ಪಂಚನಾಮೆ ನಡೆಸಿ ನನ್ನ ಸಹಿ ಪಡೆದಿದ್ದು ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

ಇಲ್ಲವೆಂದು ಹೇಳುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**